ದಿನಾಂಕ 09.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. PSR ವಕೀಲರಿಂದ:**

ದಾವೆಯ 1 ನೇ ಪ್ರತಿವಾದಿ ನನಗೆ ಸ್ವಂತ ಅಣ್ಣ ಆಗಬೇಕು . 2 ನೇ ಪ್ರತಿವಾದಿ ಯೂ ಸಹ ಅಣ್ಣ ಆಗಬೇಕು . ವಾದಿ ಯಾವ ಪರಿಹಾರ ಕೇಳಿ ಈ ದಾವೆ ಹಾಕಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ಚಕ್ಕುಬಂಧಿಯ ಸಂಬಂಧ ದಾವೆ ನಡೆಯುತ್ತಿದೆ ಎಂದರೆ , ಪೂರ್ವಕ್ಕೆ ಖಾಲಿ ಜಾಗ , ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ರಸ್ತೆ ಮತ್ತು ಖಾಲಿ ಜಾಗ ಇದೆ , ದಕ್ಷಿಣಕ್ಕೆ ರಸ್ತೆ ಇದೆ. ದಾವಾ ಸ್ವತ್ತಿನ ಚಕ್ಕುಬಂಧಿ ನಿಮಗೆ ಗೊತ್ತಿಲ್ಲ , ಆ ಕಾರಣದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ವಾದಿಯ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದೇವಮ್ಮ , ಬಸವೇಗೌಡ , ಕೆಂಪಮ್ಮ , ಕಾಳಮ್ಮನ ವಾರಸುದಾರರು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವ ಪಶ್ಚಿಮ 54 ಅಡಿ , ಉತ್ತರ ದಕ್ಷಿಣ 44 ಅಡಿ ಎಂದರೆ ಗೊತ್ತಿಲ್ಲ. ವಾದಿ ತೀರಿಕೊಂಡ ನಂತರ ಅವರ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ ವಾದಿಗಳೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ ದಾವಾ ಸ್ವತ್ತಿನ ಪೂರ್ವಕ್ಕೆ ಕರಿಗೌಡನ ಮಗ ತಿಬ್ಬೇಗೌಡರ ಮನೆ ಎಂದರೆ ಸರಿ . ಪಶ್ಚಿಮಕ್ಕೆ ಸಿದ್ದೇಗೌಡ ಅಲಿಯಾಸ್ ಜೊಲ್ಲಮರಿಗೌಡರ ಮನೆ ಎಂದರೆ ಸರಿ ,ಮತ್ತು ದೇವಮ್ಮ ನವರ ಖಾಲಿ ನಿವೇಶನ , ನಿವೇಶನ ಪಕ್ಕದಲ್ಲಿ ವಾದಿಗೆ ಸೇರಿದಂತಹ

ಕುರಿಹಟ್ಟಿ ಹೆಂಚಿನ ಮನೆ ಇರುತ್ತದೆ ಎಂದರೆ ಸರಿಯಲ್ಲ. ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಎಂದರೆ ಸರಿ . ಸದರಿ ಸ್ವತ್ತನ್ನು ವಾದಿಯ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತಿನ ಅಕ್ಕ ಪಕ್ಕ ನಿಮ್ಮ ಮನೆ ಇದೆಯಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯತ್ತಾರೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. ಪ್ರತಿವಾದಿ ಎಷ್ಟು ವಿಸ್ತೀರ್ಣ ದ ಸ್ವತ್ತನ್ನು ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ, ಸರ್ವೆ ನಂಬರ್ ಗೊತ್ತಿಲ್ಲ .

1958 ರಲ್ಲಿ ಖರೀದಿ ಮಾಡಿರುವ ಸಂಬಂಧ ಕ್ರಯ ಪತ್ರವನ್ನು ನೋಡಿರುವುದಿಲ್ಲ. ಸದರಿ ಸ್ವತ್ತಿನ ಚಕ್ಕುಬಂಧಿ ತಿಳಿದಿಲ್ಲ. ವಾದಿಯ ತಂದೆ ಮುನಿಸಿದ್ದೇಗೌಡ, ಬಸವೇಗೌಡ ಅಲಿಯಾಸ್ ತೀಟಿಗೌಡ ಅಣ್ಣ ತಮ್ಮಂದಿರು ಎಂದರೆ ಸರಿ . ಮುನಿಸಿದ್ದೇಗೌಡ ಮಾರಾಟ ಮಾಡಿರುವ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ . ಮುನಿಸಿದ್ದೇಗೌಡ ವಾದಿಯ ತಂದೆಯ ಭಾಗಕ್ಕೆ ಬಂದಿರುವ ಸ್ವತ್ತನ್ನು ಬಿಟ್ಟು ಅವರ ಭಾಗಕ್ಕೆ ಬಂದ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ .

ಸಿದ್ದೇಗೌಡ ರವರ ಮನೆಯ ಪೂರ್ವಕ್ಕೆ ವಾದಿಯ ಖಾಲಿ ನಿವೇಶನ ಎಂದರೆ ಸರಿ . ಪಶ್ಚಿಮಕ್ಕೆ ದೇಶಿಗೌಡರವರ ಮನೆ , ಉತ್ತರಕ್ಕೆ ರಸ್ತೆ ಎಂದರೆ ಸರಿ . ದಕ್ಷಿಣಕ್ಕೆ ದೇವಾಜಮ್ಮ ರವರ ಖಾಲಿ ನಿವೇಶನ ಎಂದರೆ ಸರಿಯಲ್ಲ, ರಸ್ತೆ ಎಂದು ನುಡಿಯುತ್ತಾರೆ.

ದೇವಾಜಮ್ಮ ರವರ ಖಾಲಿ ನಿವೇಶನದ ದಕ್ಷಿಣಕ್ಕೆ ವಾದಿಗೆ ಸೇರಿದಂತಹ ಕುರಿಹಟ್ಟಿ ಮನೆ ಇದೆ ಎಂದರೆ ಸರಿಯಲ್ಲ. ಕುರಿಹಟ್ಟಿ ಯಿಂದ ಪೂರ್ವಕ್ಕೆ ವಾದಿಯ ಮನೆ ಎಂದರೆ ಗೊತ್ತಿಲ್ಲ. ವಾದಿಗೆ ಇನ್ನೊಂದು ಮನೆ ಇದೆ ಎಂದು ನಿಮ್ಮ ಪ್ರಮಾಣ ಪತ್ರ ದಲ್ಲಿ ಹೇಳಿರುತ್ತೀರಿ ಎಂದರೆ ಸರಿಯಲ್ಲ.

ದಾವಾಸ್ವತ್ತಿನ ಬಗ್ಗೆ ನಿಮಗೆ ಏನೂ ಗೊತ್ತಿಲ್ಲದಿದ್ದರೂ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಹೆಂಳಿನ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ. ಆ ವಿಚಾರ ನಿಮಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು , ವಾದಿನ ಸ್ವಾ ಧೀನಾನುಭವಕ್ಕೆ ಅಡ್ಡಿ ಪಡಿಸಿರುತ್ತಾರೆ, ಆ ವಿಚಾರ ನಿಮಗೆ ಗೊತ್ತು ಎಂದರೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾ ಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ